**ಸಾಕ್ಷಿಯನ್ನು ದಿಃ 08.06.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 5 ಮತ್ತು 7 ನೇ ಪ್ರತಿವಾದಿ ಪರ ವಕೀಲರಿಂದಃ**

ನಿಪಿ. 5, 6 ಮತ್ತು 7 ಆರ್.ಟಿ.ಸಿ. ಗಳಲ್ಲಿ ನೇತ್ರಾವತಿ ಕೋಂ ರಾಮಕೃಷ್ಣ ಎಂದು ನಮೂದಾಗಿದೆ ಎಂದರೆ ಸರಿ. ಸದರಿ ಆರ್.ಟಸಿ.ಗಳು ಸರ್ವೇ ನಂ. 88/1 ಕ್ಕೆ ಸಂಬಂಧ ಪಟ್ಟಿದ್ದು ಎಂದರೆ ಸರಿ. ಸದರಿ ಆರ್.ಟಿ.ಸಿ.ಗಳಲ್ಲಿ ನೇತ್ರಾವತಿ ಕೋಂ ರಾಮಕೃಷ್ಣ ಎಂದು ಏತಕ್ಕಾಗಿ ಬಂದಿದೆ ಎಂದರೆ ಮಾರಾಟ ಮಾಡಿದ ಕಾರಣ ಅವರು ಹೆಸರು ಬಂದಿರುತ್ತದೆ. ಮುಂದುವರೆದು ನಾನು ಸಣ್ಣವನಿದ್ದ ಕಾರಣ ಮಾರಾಟದ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನೇತ್ರಾವತಿಯವರ ಕ್ರಯಪತ್ರಗಳನ್ನು ತೆಗೆದುಕೊಂಡಿರುತ್ತೇನೆ. ಸದರಿ ಕ್ರಯಪತ್ರಗಳನ್ನು ಹಾಜರು ಪಡಿಸಲು ತೊಂದರೆ ಇಲ್ಲ. 2014 ರಲ್ಲಿ ಕ್ರಯಪತ್ರಗಳ ದೃಢೀಕೃತ ನಕಲುಗಳನ್ನು ತೆಗೆದುಕೊಂಡಿರುತ್ತೇನೆ. ನನ್ನ ಹಾಗೂ 1 ನೇ ವಾದಿಯವರ ಜನನ ಪ್ರಮಾಣ ಪತ್ರ ಇದೆ. ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ.

ಮರಂಕಮ್ಮ ಅವರಿಗೆ ನಿಂಗಮ್ಮ, ಮಹದೇವನಾಯಕ ಹಾಗೂ ಹುಚ್ಚನಾಯಕ ಇವರು ಮೂರು ಮಕ್ಕಳು ಸದರಿಯವರಲ್ಲಿ ನಿಂಗಮ್ಮರವರು ತೀರಿಹೋಗಿರುತ್ತಾರೆ. ನಿಂಗಮ್ಮ ರವರ ಗಂಡನ ಹೆಸರು ಕರಿದಂಡನಾಯಕ, ಸದರಿಯವರು ತೀರಿಹೋಗಿರುತ್ತಾರೆ. ನಿಂಗಮ್ಮರವರಿಗೆ ಎರಡು ಹೆಣ್ಣು ಒಂದು ಗಂಡು ಮಕ್ಕಳು ಎಂದರೆ ಸಾಕ್ಷಿಯು ಒಂದು ಹೆಣ್ಣು ಮತ್ತು ಒಂದು ಗಂಡು ಮಕ್ಕಳು ಇದ್ದಾರೆ ಎಂದು ತಿಳಿದುಕೊಂಡಿರುತ್ತೇನೆ. ಸದರಿಯವರಲ್ಲಿ ಒಂದು ಹೆಣ್ಣು ಮಗಳು ತೀರಿಹೋಗಿದ್ದು, ಈಗ ಒಂದು ಗಂಡು ಮತ್ತು ಒಂದು ಹೆಣ್ಣು ಇದ್ದಾರೆ ಎಂದರೆ ಸರಿ. ಸದರಿ ತೀರಿ ಹೋದ ಹೆಣ್ಣು ಮಗಳಿಗೆ ಮಕ್ಕಳು ಇದ್ದಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಸಣ್ಣಮ್ಮನ ಮಗ ಸ್ವಾಮಿನಾಯಕ ಇವರು ಮದುವೆಯಾಗದೇ ತೀರಿ ಹೋಗಿರುತ್ತಾರೆ ಎಂದರೆ ಮೊದಲಿಗೆ ಹೌದು ಎಂದು ಹೇಳಿ ನಂತರ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸಣ್ಣಮ್ಮನ ಮಗಳು ಮಹದೇವಮ್ಮ ತೀರಿಹೋಗಿರುತ್ತಾರೆ ಎಂದರೆ ಸರಿ. ಮಹದೇವಮ್ಮನ ಗಂಡ ಮಹದೇವನಾಯಕ ತೀರಿಹೋಗಿರುತ್ತಾರೆ. ಮಹದೇವಮ್ಮನಿಗೆ ಚಂದ್ರಶೇಖರ್ ಎಂಬ ಒಬ್ಬ ಮಗನಿದ್ದಾನೆ, ಅವರಿಗೆ ಹೆಣ್ಣು ಮಕ್ಕಳಿಲ್ಲ ಎಂದರೆ ಸರಿ. ಚಿಕ್ಕ ಕರಿನಾಯಕ ಅಲಿಯಾಸ್

ಕರಿನಾಯಕನಿಗೆ ವಾದ ಪತ್ರದಲ್ಲಿ ತೋರೀಸಿರುವ ಮೂರು ಆಸ್ತಿಗಳು ಇದ್ದವು. ಪ್ರತಿವಾದಿಯವರು ಈ ದಾವೆಯಲ್ಲಿ ಏನೆಲ್ಲಾ ತಕರಾರು ಹಾಕಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ.

ಈಗ ತೋರೀಸುತ್ತಿರುವ ದಾಖಲೆಯು ಉಪ ವಿಭಾಗ ಮೈಸೂರು ಇವರ ಬಳಿ ನನ್ನ ತಾಯಿ ಸಲ್ಲಿಸಿರುವ ಮೇಲ್ಮನವಿಯಾಗಿರುತ್ತದೆ. ಸಾಕ್ಷಿಯು ದಾಖಲೆಯನ್ನು ನೋಡಿ ಗುರುತಿಸಿದ ಕಾರಣ ನಿಡಿ. 1 ಎಂದು ಗುರುತಿಸಲಾಯಿತು. ಮುಂದುವರೆದು ಸಾಕ್ಷಿಯು ಸದರಿ ಮೇಲ್ಮನವಿಯ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಉತ್ತರಿಸಿರುತ್ತಾರೆ. ಈಗ ತೋರಿಸುತ್ತಿರುವ ದಾಖಲೆ ಓ.ಎಸ್. ನಂ. 325/2007 ರಲ್ಲಿ ನನ್ನ ತಾಯಿ ಮಹದೇವಮ್ಮ ರವರ ವಿರುದ್ಧ ಹಾಕಿದ ವಾದ ಪತ್ರ ಎಂದರೆ ಸಾಕ್ಷಿಯು ದಾಖಲೆ ಓದಿ ನೋಡಿ ನನಗೆ ಗೊತ್ತಾಗುತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿಯವರು ತಮ್ಮ ತಕರಾರಿನಲ್ಲಿ ಓ.ಎಸ್. 325/2007 ರ ಬಗ್ಗೆ ಹೇಳಿದ್ದು ಸದರಿ ತಕರಾರು ಸಲ್ಲಿಸಿದ ನಂತರವಾಗಲೀ ಸದರಿ ಓ.ಎಸ್ ದಾವೆಯ ಬಗ್ಗೆ ಮಾಹಿತಿ ಪಡೆದುಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಮಾಹಿತಿ ಪಡೆದುಕೊಂಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾವು ನನ್ನ ತಾಯಿಯ ಜೊತೆ ವಾಸವಾಗಿದ್ದೇವೆ. ಸದರಿ ಓ.ಎಸ್. ನಂ. 325/2007 ರ ಬಗ್ಗೆ ನನ್ನ ತಾಯಿಯ ಬಳಿ ವಿಚಾರಿಸಿರುವುದಿಲ್ಲ. ಮುಂದುವರೆದು ಸಾಕ್ಷಿಯು ನನ್ನ ತಾಯಿಗೆ ಓದು ಬರಹ ಗೊತ್ತಿಲ್ಲದ ಕಾರಣ ದಾವೆಯ ಬಗ್ಗೆ ಉತ್ತರಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ದಾವ ಸ್ವತ್ತುಗಳ ಚೆಕ್ಕುಬಂಧಿ ತೋರಿಸಲು ನನ್ನ ಬಳಿ ದಾಖಲೆ ಇದೆ. ಚಿಕ್ಕ ಕರಿನಾಯಕ ಇವರ ಮೊದಲನೇ ಹೆಂಡತಿ ಮರಂಕಮ್ಮ ರವರಿಗೆ ಸರ್ವೇ ನಂಬರ್ 112, 361/2 ಹಾಗೂ 121/2 ರಲ್ಲಿ ಭಾಗ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಅವರ ಎರಡನೇ ಹೆಂಡತಿ ಸಣ್ಣಮ್ಮ ರವರಿಗೆ ಸದರಿ ಮೂರು ಸರ್ವೇ ನಂಬರ್ ಗಳಲ್ಲಿಯೂ ಭಾಗ ಬಂದಿದೆ ಎಂದರೆ ಗೊತ್ತಿಲ್ಲ. ಮರಂಕಮ್ಮ ರವರಿಗೆ ಸರ್ವೇ ನಂ. 121/2 ರಲ್ಲಿ 18 ಗುಂಟೆ ಹೊಲ ಬಂದಿದೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ಅದು ಒಟ್ಟು ಕುಟುಂಬದ ಆಸ್ತಿ ಎಂದು ಉತ್ತರಿಸಿರುತ್ತಾರೆ. ಸರ್ವೇ ನಂ. 112 ರಲ್ಲಿ 2 ಎಕರೆ 18 ½ ಗುಂಟೆ ಮರಂಕಮ್ಮರವರಿಗೆ

ವಿಭಾಗದಲ್ಲಿ ಬಂದಿತ್ತು ಎಂದರೆ ಆ ಬಗ್ಗೆ ಗೊತ್ತಿಲ್ಲ. ಸಣ್ಣಮ್ಮರವರಿಗೆ ಸರ್ವೇ ನಂ. 121/2 ರಲ್ಲಿ 1 ಎಕರೆ 30 ಗುಂಟೆ ಜಮೀನು ಬಂದಿದೆ ಎಂದರೆ ಗೊತ್ತಿಲ್ಲ. ಸರ್ವೇ ನಂ. 88 ರಲ್ಲಿ 1 ಎಕರೆ 12 ಗುಂಟೆ ಜಮೀನು ಸಣ್ಣಮ್ಮ ರವರಿಗೆ ಬಂದಿದೆ ಎಂದರೆ ಗೊತ್ತಿಲ್ಲ.

ಸರ್ವೇ ನಂ. 88 ರಲ್ಲಿ ಸಣ್ಣಮ್ಮ ನವರಿಗೆ ಬಂದ ಹಿಸ್ಸೆಯನ್ನು ನೇತ್ರಾವತಿ ಯವರಿಗೆ ಸಣ್ಣಮ್ಮನವರು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಭಾಗ ಬಂದಿರುವ ಬಗ್ಗೆ ಗೊತ್ತಿಲ್ಲ, ಮಾರಾಟ ಆಗಿದೆ ಎಂದು ಉತ್ತರಿಸಿರುತ್ತಾರೆ. ಮರಂಕಮ್ಮ ರವರು ತಮ್ಮ ಹಿಸ್ಸೆಗೆ ಬಂದ ಸರ್ವೇ ನಂ. 121/2 ರಲ್ಲಿ 18 ಗುಂಟೆ ಜಮೀನನ್ನು ದಿಃ 29.03.1994 ರಲ್ಲಿ ಮಹದೇವಮ್ಮ ಕೋನ ಮಹದೇವನಾಯಕ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸರ್ವೇ ನಂ. 112 ರಲ್ಲಿ 2 ಎಕರೆ 18 ಗುಂಟೆ ಜಮೀನನ್ನು ಮರಂಕಮ್ಮ ರವರು ಲಕ್ಷ್ಮೀಗೌಡ ಬಿನ್ ರುದ್ರೇಗೌಡ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಮಾರಾಟ ಆಗಿದೆ, ಒಟ್ಟು ಕುಟುಂಬದ ಆಸ್ತಿ ಆದ ಕಾರಣ ಹಿಸ್ಸೆಗೆ ಬಂದ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಇದೆ ಮೊದಲ ಬಾರಿ ಹೇಳುತ್ತಿದ್ದು ಆ ಬಗ್ಗೆ ವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು ನೀಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.